

## ಸಮಾಜದ ನಡೆಯೇ ಬದಲಾಗಬೇಕು

**–ಕಿರಣ್ ಶ್ರೀನಿವಾಸ್,** ನಟ

ಮಹಿಳೆಯ ಪರಿಸ್ಥಿತಿಯನ್ನು ಒಬ್ಬ ಪುರುಷನಾಗಿ ಮಾತ್ರ ನಾನು ನೋಡಬಹುದು. ಹೀಗಾಗಿ ನನ್ನ ದೃಷ್ಟಿಕೋನ ಕೂಡ ಪಕ್ಷಪಾತಿಯಾಗಿರಬಹುದು. ಒಬ್ಬ ಮಹಿಳೆಯಿಂದ ಮಾತ್ರ ಇದಕ್ಕೆ ಉತ್ತರ ಸಿಗಬಹುದು. ಈ ವಿಷಯದಲ್ಲಿ ನನ್ನನ್ನು ನಾನೇ ಪ್ರಶ್ನಿಸಿಕೊಳ್ಳಲು ಅರ್ಹತೆ ಇಲ್ಲ. ನನಗೆ ಮಹಿಳೆಯಾಗಿ ಅನುಭವ ಗೊತ್ತಿಲ್ಲ. ಆದರೆ ಏನು ಧ್ವನಿ ಎತ್ತುತ್ತಿದ್ದಾರೆ, ಅದನ್ನು ಬೆಂಬಲಿಸಬಹುದು. ನಾನು ಹೋಗಿ 'ಇದು ಹೀಗೇ' ಎಂದು ಹೇಳಲು ಸಾಧ್ಯವಿಲ್ಲ.

ಸಿನಿಮಾರಂಗದಲ್ಲಿನ ಮಹಿಳೆಯರ ಸ್ಥಿತಿಗತಿಯ ವಿಚಾರವನ್ನು ಮಾತನಾಡುವ ಮೊದಲು, ಸಮಾಜದಲ್ಲಿ ಈ ಪ್ರಶ್ನೆ ಇದೆಯಾ ಎಂದು ನೋಡಿಕೊಳ್ಳಬೇಕಿದೆ. ಸಮಾಜದಲ್ಲಿ ಮಹಿಳೆಗೆ ಒಂದು ಸುರಕ್ಷತೆ–ಭದ್ರತೆ, ಅವರ ನಿಲುವಿಗೆ ನಿಲ್ಲುವಂಥ ಸ್ಥಾನಮಾನ, ಘನತೆ–ಗೌರವದ ಪ್ರಶ್ನೆ ಬಂದರೆ, 'ಇಲ್ಲ' ಎಂದೇ ನನಗೆ ಅನ್ನಿಸುತ್ತೆ. ಚಿತ್ರರಂಗ ಕೂಡ ಸಮಾಜದ ಒಂದು ಭಾಗ. ಸಮಾಜದ ಹೊರಗಂತೂ ಇಲ್ಲ. ಚಿತ್ರರಂಗದಲ್ಲಿರುವಂಥ ಅಸಮಾನತೆಯನ್ನು ಸರಿ ಮಾಡಿದ ತಕ್ಷಣ ಸಮಾಜದಲ್ಲಿನ ಅಸಮಾನತೆ ಸರಿ ಹೋಗುತ್ತದಾ? ನನ್ನ ಉಲ್ಟಾ ಆಲೋಚನೆ ಎಂದರೆ, ಸಮಾಜ ಸರಿ ಹೋಯಿತು ಎಂದರೆ ಚಿತ್ರರಂಗದಲ್ಲಿ ಬದಲಾವಣೆಯೂ ಅನಿವಾರ್ಯವಾಗುತ್ತದೆ, ಬದಲಾಗುತ್ತದೆ ಕೂಡ.



ನನ್ನ ನಾನು ಯಾವಾಗಲೂ ಒಂದು ಪ್ರಶ್ನೆ ಕೇಳಿಕೊಳ್ಳುತ್ತೇನೆ. ಸಮಾಜದಲ್ಲಿ ಹೆಣ್ಣಿಗೆ ಸಮಾನತೆ ಇದೆಯಾ? ಅವಳ ಹಕ್ಕುಗಳನ್ನು ಅವಳಿಗೆ ಕೊಟ್ಟಿದ್ದೇವಾ? ಇವತ್ತು ಯಾವ ರೀತಿ ಪುರುಷರಿಗೆ ಒಂದು ಬೆಂಬಲ ಇದೆ, ವ್ಯವಸ್ಥೆ ಇದೆ, ಅವರ ನಿಲುವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ, ಧ್ವನಿ ಇದೆ, ಆ ರೀತಿ ಮಹಿಳೆಯರಿಗೆ ಒಂದು ಸಮಾನ ಅವಕಾಶ ಇದೆಯಾ ಎಂದು ಯೋಚಿಸಬೇಕು. ಹಾಗೆ ನೋಡಿದಾಗ 'ಇಲ್ಲ' ಎನ್ನುವುದು ಸ್ಪಷ್ಟವಾಗಿ ನನಗೆ ಗೊತ್ತಾಗುತ್ತದೆ. ನನ್ನ ಉದ್ದೇಶ ಇರುವುದು, ಸಮಾಜದ ಈ ಅಸಮಾನತೆಯನ್ನು ಸರಿ ಮಾಡಿಕೊಂಡರೆ, ಅದರ ಉಪ ಉತ್ಪನ್ನಗಳಾದ ಚಿತ್ರರಂಗ, ಕಾರ್ಪೊರೇಟ್ ಕ್ಷೇತ್ರ, ಮಾಧ್ಯಮ, ಆಸ್ಪತ್ರೆ, ಶಿಕ್ಷಣ, ಪೊಲೀಸ್, ಕಾರ್ಖಾನೆ ಸೇರಿದಂತೆ ಎಲ್ಲ ರಂಗಗಳಲ್ಲೂ ಸರಿ ಹೋಗುತ್ತದೆ ಎಂಬುದು.

ಮಹಿಳೆಯರು ಎಲ್ಲೇ ಕೆಲಸ ಮಾಡುವವರಾಗಲಿ ಅವರಿಗೆ ಸಂಪೂರ್ಣ ಭದ್ರತೆ ಬೇಕು. ಅದು ಸಾಧ್ಯವಾಗುವವರೆಗೂ ಒಂದೇ ನಿರ್ದಿಷ್ಟ ರಂಗವನ್ನು ನಾವು ದುರ್ಬೀನಿನಲ್ಲಿ ನೋಡುವುದು ಸೂಕ್ತವಲ್ಲ. ಹಾಗೆ ನೋಡುವುದು ತಪ್ಪೂ ಅಲ್ಲ. ಅದರಿಂದ ಕೌಂಟರ್ ಪ್ರೊಡಕ್ಟಿವ್ ಜಾಸ್ತಿಯಾಗುತ್ತದೆ ಅಷ್ಟೆ. ಹೀಗಾಗಿ ಹೆಣ್ಣಿನ ಬಗೆಗೆ ನಮ್ಮ ಮೂಲ ನಡವಳಿಕೆಯನ್ನೇ ತಿದ್ದಿಕೊಳ್ಳಬೇಕಿದೆ.

ಇಷ್ಟು ವರ್ಷಗಳಲ್ಲಿ ಹೆಣ್ಣಿನ ಸಮಾನತೆ ವಿಷಯದಲ್ಲಿ ಏನೆಲ್ಲಾ ಏಳಿಗೆ ಆಗಿದೆ, ಆಗಿದ್ದರೆ ಉತ್ತಮ ರೀತಿ ಆಗಿದೆಯೇ ಎಂದು ಕೇಳಿಕೊಳ್ಳಬೇಕು. ಆಗಿದೆ ಎಂದ ಮಾತ್ರಕ್ಕೆ ಸಂತುಷ್ಟರಾಗಬಾರದು. ಈಗ ಏನೇನು ಘಟನೆ–ಆಂದೋಲನಗಳು ನಡೆದಿವೆ 50–60 ವರ್ಷಗಳಲ್ಲಿ, ಅದರಿಂದ ಮಹಿಳೆಯರ ಸ್ಥಾನಕ್ಕೆ ಪ್ರಯೋಜನ ಆಗಿದೆಯೇ? ಎಷ್ಟರ ಮಟ್ಟಿಗೆ ಆಗಿದೆ? ಆಗಿರುವುದನ್ನು ಕಾಪಾಡಿಕೊಳ್ಳುವುದು ಹೇಗೆ? ಮುಂದೆ ಏನಾಗಬೇಕಿದೆ? ಈಗ ಬರುತ್ತಿರುವ ಜೆನ್ ಝೀ ಅವರನ್ನು ಹೇಗೆ ಒಳಗೊಳ್ಳಬೇಕು? ಹೀಗೆ ಒಂದು ಸಂಪೂರ್ಣ ರೋಡ್ ಮ್ಯಾಪ್ ಕೂಡ ಮಾಡಿಕೊಳ್ಳಬೇಕಿದೆ.

ಹಳೇ ವರ್ಗದವರನ್ನು ಬದಲಾಯಿಸುವುದು ಕಷ್ಟ. ಒಂದು ಜಾಹೀರಾತು, ಸಿನಿಮಾ, ಬೀದಿ ನಾಟಕ, ಪುಸ್ತಕ ಆಗಬಹುದು, ಮಾಧ್ಯಮವಾಗಬಹುದು ಮುಂದೆ ಬರುವ ಪೀಳಿಗೆಯನ್ನು ಯಾವ ರೀತಿ ಮುಂದೆ ತರಬಹುದು ಎಂಬ ಅಜೆಂಡಾ ಇರಬೇಕು.

ಮಹಿಳೆಯರ ಜೊತೆ ನಿಂತು ಸಮಸ್ಯೆಯನ್ನು ನಾನು ನೋಡಬಹುದು. ಅವರ ಧ್ವನಿಯನ್ನು ಬೆಂಬಲಿಸುವ ಧೈರ್ಯ ಮಾಡಬಹುದು. ಆದರೆ ನಾನು ಅರ್ಹನಲ್ಲ ಎಂದೇ ನನಗೆ ಅನ್ನಿಸುತ್ತದೆ. ಸಿನಿಮಾರಂಗದಲ್ಲಿನ ಅಸಮಾನತೆಯನ್ನು ಕಂಡರೆ ಬೇಸರ ಆಗುತ್ತದೆ – ಯಾಕೆ ಈ ರೀತಿ ಎಂದು.

ಲೈಂಗಿಕ ದೌರ್ಜನ್ಯವನ್ನು ನಾನು ಕಂಡಿಲ್ಲ, ಅದು ಅನುಭವಕ್ಕೆ ಬಂದಿಲ್ಲ. ಆದರೆ ಬೇರೆ ರೀತಿಯ ಅಸಮಾನತೆಗಳನ್ನು ನೋಡಿದ್ದೇನೆ. ಪುರುಷರಿಗೆ ಸಿಗುವ ಸೌಲಭ್ಯಗಳು, ಮಹಿಳೆಯರಿಗೆ ಸಿಗುವ ಸೌಲಭ್ಯಗಳು ಯಾವ ರೀತಿ ಇರುತ್ತವೆ, ಒಂದು ಸೆಟ್‌ನಲ್ಲಿ ಎಷ್ಟು ಜನ ಇರುತ್ತೇವೆ, ಅದರಲ್ಲಿ ಮಹಿಳೆಯರು ಎಷ್ಟು ಜನ ಇದ್ದಾರೆ, ಹೀರೋಯಿನ್ ಅಥವಾ ಮಹಿಳಾ ಕಲಾವಿದರಿಗೆ ಕಂಫರ್ಟ್ ಎಷ್ಟಿದೆ, ನಿರ್ದೇಶಕರ ಟೀಮ್‌ನಲ್ಲಿ ಎಷ್ಟು ಜನ ಇದ್ದಾರೆ – ಈ ಕುರಿತು ಯೋಚಿಸಿದಾಗ ಬೇಸರ ಆಗಿದೆ. ಮಹಿಳೆಯರು ಹೆಚ್ಚು ತೊಡಗಿಸಿಕೊಳ್ಳಲು ಒಂದು ಸುಭದ್ರ ವಾತಾವರಣವನ್ನು ಹೇಗೆ ನಿರ್ಮಿಸಬಹುದು ಎಂಬುದನ್ನು ನಾವು ಪುರುಷರು ಗಂಭೀರವಾಗಿ ಯೋಚಿಸಬೇಕಿದೆ.

ಮೂಲ ಸೌಲಭ್ಯಗಳನ್ನು, ಉದಾಹರಣೆಗೆ ಶೌಚಾಲಯದಂಥ ಸೌಲಭ್ಯವನ್ನು ಮಹಿಳೆಯರಿಗೆ ಒದಗಿಸುವ ಅವಶ್ಯಕತೆ ಎಷ್ಟಿದೆ ಎಂಬುದೇ ಹಲವರಿಗೆ ತಿಳಿದಿಲ್ಲ. ಮುಟ್ಟಿನ ಸಂದರ್ಭಗಳಲ್ಲಿ ಹೀರೋಯಿನ್‌ಗಳಿಗೆ ಕಿರಿಕಿರಿಯಾಗುತ್ತದೆ. ಈ ವಿಷಯವನ್ನು ಯಾರಿಗೆ ಹೇಳಲು ಸಾಧ್ಯವಾಗುತ್ತದೆ? ನನ್ನ ಪ್ರಕಾರ ಮಹಿಳೆಯರನ್ನು ಹೆಚ್ಚು ಸಂಖ್ಯೆಯಲ್ಲಿ ತೊಡಗಿಸಿಕೊಂಡರೆ ಮಹಿಳೆಯರಿಗೇ ಕಂಫರ್ಟ್ ಲೆವೆಲ್ ಹೆಚ್ಚಾಗುತ್ತದೆ. ಪುರುಷರಿಗೂ ಮಹಿಳೆಯರ ಮುಂದೆ ಹೇಗೆ ನಡೆದುಕೊಳ್ಳಬೇಕು, ಯಾವ ರೇಖೆಯನ್ನು ದಾಟಬಾರದು ಎಂಬುದರ ಅರಿವು ಇರುತ್ತದೆ. ಒಂದು ವೃತ್ತಿಜಾಗದಲ್ಲಿದ್ದಾಗ ನಾಲಿಗೆಯನ್ನು ಎಷ್ಟು ಸೂಕ್ಷ್ಮತೆಯಿಂದ ಇಟ್ಟುಕೊಳ್ಳಬೇಕು ಎಂಬುದರ ಕಲಿಕೆಯೂ ಸಾಧ್ಯವಾಗುತ್ತದೆ. ■